
# ಬೆಳಕಿನ ಸಂಚಲನ

ಸಂಪುಟ 11, ಸಂಚಿಕೆ 5 ದ್ವೈಮಾಸಿಕ ವಾರ್ತಾಪತ್ರ ಸೆಪ್ಟೆಂಬರ್–ಅಕ್ಟೋಬರ್ 2023

**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಠ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಜನವರಿ 8, 2012)

**ಅನು: ಕಾಂಚನಲತಾ**

ಸಮೃದ್ಧಿ ಎಂದರೇನು?

ಸಮೃದ್ಧಿಯನ್ನು ಹೇರಳವಾದ ಹಣ ಮತ್ತು ಪ್ರಾಪಂಚಿಕ ವಸ್ತುಗಳು ಎಂದು ಸಾಮಾನ್ಯವಾಗಿ ಅರ್ಥೈಸಿಕೊಳ್ಳಲಾಗಿದೆ. ನಿಜವಾದ ಸಮೃದ್ಧಿಯೆಂದರೆ ಎಲ್ಲಾ ಸಮೃದ್ಧಿಗಳ ಮೂಲಕ್ಕೆ ಸಂಕರ್ಪಗೊಳ್ಳುವುದು. ಆ ಮೂಲವು ಭಗವಂತನೇ ಆಗಿದ್ದಾನೆ.

ನಾವು ಭಗವಂತನೊಂದಿಗೆ ಸಂಪರ್ಕದಲ್ಲಿದ್ದರೆ, ನಮ್ಮಲ್ಲಿ ಹಣವಿದ್ದರೂ ಅಥವಾ ಇಲ್ಲದಿದ್ದರೂ ನಾವು ಸಮೃದ್ಧಿಯಾಗಿರುತ್ತೇವೆ. ಸಮೃದ್ಧಿ ಎಂದರೆ ಜ್ಞಾನ, ಚೈತನ್ಯಗಳು, ಸಮೃದ್ಧವಾದ ಪ್ರೀತಿ, ಸಮೃದ್ಧವಾದ ಜೀವನ, ಸಮೃದ್ಧವಾದ ಜೀವಶಕ್ತಿಯನ್ನು ಹೊಂದಿರುವುದು ಸಹ ಆಗಿದೆ.

ಜೀವನವನ್ನು ಸಂಪೂರ್ಣವಾಗಿ ಬದುಕದೇ, ಜನರು ಜೀವನದ ಸಮೃದ್ಧಿಯನ್ನು ಕಳೆದುಕೊಳ್ಳುತ್ತಾರೆ. ಅವರು ಆಕಾಶ, ಪೌರ್ಣಿಮೆಯ ಚಂದ್ರೋದಯ, ಕವಿತೆ, ಸಂಗೀತ ಮತ್ತು ಇನ್ನೂ ಅನೇಕ ಸೌಂದರ್ಯದ ಸಂಗತಿಗಳನ್ನು ಕಳೆದುಕೊಳ್ಳುತ್ತಾರೆ.

ಸಮೃದ್ಧಿಯು ಶಾಂತಿ, ಸಂತೃಪ್ತಿ ಮತ್ತು ವೈರಾಗ್ಯದಿಂದಿರುವುದು ಸಹ ಆಗಿದೆ. ನಾವು ಮೂಲದೊಂದಿಗೆ ಸಂಪರ್ಕಗೊಂಡಾಗ ಇವೆಲ್ಲವನ್ನು ಪಡೆಯುತ್ತೇವೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಕಾಂಚನಲತಾ**

ಮಕ್ಕಳು ಗುಂಪಿನಲ್ಲಿ ಮೌನವಾಗಿ ಕುಳಿತು ಲೈಟ್ ಚಾನೆಲ್ ಮಾಡುವುದನ್ನು ನೋಡುವುದು ಒಂದು ಸುಂದರವಾದ ಅನುಭವ. ಚಾನೆಲ್ ಮಾಡಿದ ಬೆಳಕಿನ ಕಂಪನಗಳನ್ನು ಶಾಲೆಯ ಆವರಣದಲ್ಲಿ ಹಾಜರಿರುವ ಪ್ರತಿಯೊಬ್ಬರೂ ಅನುಭವಿಸಬಹುದು. ಇದು ನಮ್ಮೆಲ್ಲಾ ಕಾರ್ಯಕರ್ತರ ಅನುಭವವಾಗಿದೆ. ಆ ಭವ್ಯವಾದ ಅನುಭವ ಮತ್ತು ಜಗತ್ತಿಗೆ ಶಾಂತಿಯನ್ನು ತರಬೇಕೆಂಬ ಪ್ರಾಮಾಣಿಕ ಇಚ್ಛೆಯು ಬಹುಶಃ ಹೆಚ್ಚು ಕೆಲಸ ಮಾಡಲು ಅವರಿಗೆ ಪ್ರೇರೇಪಣೆ ನೀಡುತ್ತದೆ ಎನಿಸುತ್ತದೆ.

ನಮ್ಮ ಕಾರ್ಯಕರ್ತರಿಂದ ದೊರೆತ ಸ್ಪಷ್ಟವಾದ ಸೂಚನೆಗಳಿಂದ ಅನೇಕ ಶಾಲೆಗಳವರು ಈಗ ತಾವೇ ಸ್ವತಃ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ನಡೆಸಲು ಶಕ್ತರಾಗಿದ್ದಾರೆ. ಲಕ್ಷಾಂತರ ಜನ ಲೈಟ್ ಚಾನೆಲ್ ಮಾಡುತ್ತಿದ್ದಾರೆ. ನವಯುಗವು ಬಹಳ ದೂರವಿಲ್ಲ!!

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

ಲೈಟ್ ಚಾನೆಲಿಂಗ್ ಕೆಲಸವು ಉತ್ತಮ ಗತಿಯಲ್ಲಿ ಸಾಗುತ್ತಿದೆ. ಎಂದಿನಂತೆ, ನಮ್ಮ ಕಾರ್ಯಕರ್ತರು ನೂತನ ಹುರುಪು ಮತ್ತು ಶಕ್ತಿಯೊಂದಿಗೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಭಾರತದಲ್ಲಿ ಸತತವಾಗಿ ಮಳೆ ಸುರಿಯುತ್ತಿದೆ. ಆದರೆ ಅದು ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ನಡೆಸಲು ನಮ್ಮ ಕಾರ್ಯಕರ್ತರಿಗಿರುವ ಉತ್ಸಾಹವನ್ನು ತಗ್ಗಿಸುತ್ತಿಲ್ಲ. ಶಾಲಾ ಅಧಿಕಾರವರ್ಗದವರೂ ಸಹ ನಮ್ಮ ವಿನಂತಿಗೆ ಒತ್ತಾಸೆ ನೀಡುತ್ತಿದ್ದಾರೆ ಮತ್ತು ಸೆಷನ್‌ಗಳನ್ನು ತಮ್ಮ ಸಭಾಂಗಣಗಳಲ್ಲಿ ಮತ್ತು ತರಗತಿಗಳಲ್ಲಿ ನಡೆಸಲು ನಮ್ಮ ಕಾರ್ಯಕರ್ತರಿಗೆ ಅನುಮತಿ ನೀಡುತ್ತಿದ್ದಾರೆ.

ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಮಳೆಯ ಕಾರಣದಿಂದ ಹಲವಾರು ಸೆಷನ್‌ಗಳು ರದ್ದಾಗುತ್ತಿವೆ. ಅನೇಕ ಬಾರಿ, ವಿಶ್ವವು ನಮ್ಮ ನಿಸ್ವಾರ್ಥ ಕೆಲಸವನ್ನು ಉತ್ತೇಜಿಸುತ್ತದೆ ಮತ್ತು ಅನುಗ್ರಹಿಸುತ್ತದೆ. ಒಮ್ಮೆ ಒಬ್ಬ ಕಾರ್ಯಕರ್ತರು ಸೆಷನ್ ನಡೆಸುತ್ತಿದ್ದಾಗ ಇದ್ದಕ್ಕಿದ್ದಂತೆ ಮಳೆ ಆರಂಭವಾಯಿತು ಹಾಗೂ ಸೆಷನ್ ಇನ್ನೇನು ರದ್ದಾಗುವುದರಲ್ಲಿತ್ತು. ಆದರೆ, ಮಕ್ಕಳು ತರಗತಿಗೆ ವಾಪಸಾಗಲು ತಯಾರಾಗುತ್ತಿದ್ದಂತೆ, ಮಳೆಯು ಥಟ್ಟನೆ ನಿಂತುಹೋಯಿತು. ನಮ್ಮ ಕಾರ್ಯಕರ್ತರು ಸೆಷನ್‌ಅನ್ನು ಸರಾಗವಾಗಿ ನಡೆಸಲು ಸಾಧ್ಯವಾಯಿತು. ಅಂತಹ ಅನುಭವಗಳು ಯಾವಾಗಲೂ ನಮ್ಮ ಮನ ಮುಟ್ಟುತ್ತವೆ.


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.

ಫೋನ್: 99000 75280 (10am to 5pm), ಇ–ಮೇಲ್: info@lightagemasters.com

website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

**ಅನು: ಕಾಂಚನಲತಾ**

- ಪ್ರತಿಯೊಬ್ಬರೂ ಮೂಲಭೂತವಾಗಿ ಒಳ್ಳೆಯವರೇ ಆಗಿರುತ್ತಾರೆ. ಇತರರಲ್ಲಿರುವ ಒಳ್ಳೆಯತನಕ್ಕೆ ನಾವು ಸಂಪರ್ಕಗೊಳ್ಳಬೇಕು ಮತ್ತು ಒಳ್ಳೆಯದಲ್ಲ–ದಿರುವುದನ್ನು ನಾವು ಕಡೆಗಾಣಿಸಬೇಕು. ಇದು ನಮ್ಮೊಳಗಿರುವ ಒಳ್ಳೆಯತನವನ್ನು ಹೊರತರಲು ಸಹಾಯಮಾಡುತ್ತದೆ.
- ಒಂದು ಸಕಾರಾತ್ಮಕ ಆಲೋಚನೆ ಅದ್ಭುತವಾದ ಚೈತನ್ಯಗಳನ್ನು ಹೊಂದಿರುತ್ತದೆ. ಅದನ್ನು ಅಳತೆ ಮಾಡಲು ಸಾಧ್ಯವಿಲ್ಲ. ಇಡೀ ಜಗತ್ತಿಗೆ ವಿಸ್ತರಿಸಿ–ಕೊಳ್ಳಲು ಅದು ನಮಗೆ ಆಸ್ಪದ ನೀಡುತ್ತದೆ. ಒಂದು ಸಕಾರಾತ್ಮಕ ಆಲೋಚನೆಯು ಪ್ರೀತಿ ಮತ್ತು ಸೃಷ್ಟಿಯ ಅದ್ಭುತವಾದ ಚೈತನ್ಯಗಳನ್ನು ಹೊತ್ತಿರು–ತ್ತದೆ. ಪ್ರಾಮಾಣಿಕವಾದ ಹಾಗೂ ನೈಜವಾದ ಉದ್ದೇಶವುಳ್ಳ ಸಕಾರಾತ್ಮಕ ಆಲೋಚನೆಯು ಮತ್ತೊಬ್ಬರನ್ನು ಗುಣಪಡಿಸುತ್ತದೆ.
- ಸಂತೋಷವು ನಕಾರಾತ್ಮಕತೆಯನ್ನು ದೂರ ಇಡುತ್ತದೆ. ನಾವು ಸಂತೋಷವಾಗಿರಬೇಕು. ನಾವು ಯಾವಾಗಲೂ ಸಂತೋಷವಾಗಿರಲು ದಾರಿಗಳನ್ನು ಹುಡುಕಬೇಕು. ನಾವು ಸಂತೋಷವಾಗಿರುವಾಗ ನಮ್ಮಲ್ಲಿ ನಕಾರಾತ್ಮಕತೆ, ಕೋಪ, ಅಸೂಯೆ ಇತ್ಯಾದಿಗಳು ಇರುವುದಿಲ್ಲ.
- ದೈವಿಕ ಆನಂದವು ಸಂಪೂರ್ಣ ಶಾಂತಿ ಮತ್ತು ಸಂತೋಷದಿಂದ ಜೀವನ ನಡೆಸಲು ನಮಗೆ ಸಹಾಯ ಮಾಡುವುದಲ್ಲದೆ, ಅದು ನಮ್ಮನ್ನು ಪರಿವರ್ತಿಸು–ತ್ತದೆ ಮತ್ತು ದೇವರ ಜೊತೆ ಸಂಪರ್ಕ ಹೊಂದಲು ಸಹಾಯ ಮಾಡುತ್ತದೆ.
- ನೀವು ಬೆಳಕು ಮತ್ತು ಪ್ರೀತಿಯನ್ನು ಇನ್ನೊಬ್ಬ ವ್ಯಕ್ತಿಯ ಸಂತೋಷಕ್ಕಾಗಿ, ಯಾವುದೇ ಪ್ರತಿಫಲಾಪೇಕ್ಷೆ–ಯಿಲ್ಲದೆ ಪರಿಶುದ್ಧವಾದ ಉದ್ದೇಶದಿಂದ ಕಳುಹಿಸಿ–ದಾಗ, ವಿಶ್ವವು ನಿಮಗೆ ಪ್ರೀತಿಯನ್ನು ಕಳುಹಿಸುತ್ತದೆ. ನಿಮ್ಮ ಇಂಗಿತ ಸೂಚನೆ (gesture)ಯನ್ನು ಮೆಚ್ಚು–ವುದು ಮಾತ್ರವಲ್ಲದೆ ಪುರಸ್ಕಾರವನ್ನೂ ಸಹ ನೀಡಲಾಗುತ್ತದೆ.
- ನಮ್ಮ ಎಲ್ಲಾ ಆಲೋಚನೆಗಳು ಮತ್ತು ಭಾವನೆ–ಗಳನ್ನು ವಿಶ್ವವು ಗುರುತು ಹಾಕಿ ಕೊಳ್ಳುತ್ತದೆ. ನಾವು ಇಡೀ ವಿಶ್ವಕ್ಕೆ ಬೆಳಕನ್ನು ಚಾನೆಲ್ ಮಾಡಿದಾಗ, ವಿಶ್ವವು ಅದನ್ನು ಅಭಿನಂದಿಸುತ್ತದೆ ಮತ್ತು ತನ್ನದೇ ಆದ ರೀತಿಯಲ್ಲಿ ನಮಗೆ ಪುರಸ್ಕಾರ ನೀಡುತ್ತದೆ.
- ದೇವರ ಪ್ರೀತಿ ಬೇಷರತ್ತಾದುದು, ಗ್ರಹಿಸಲಸಾಧ್ಯ–ವಾದುದು, ಅಚಲವಾದುದು ಮತ್ತು ಶಾಶ್ವತವಾ–ದುದು. ಅವನ ಪ್ರೀತಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ.
- ನಾವು ಧ್ಯಾನ ಮಾಡಿದಾಗ, ಪ್ರೀತಿ ಮತ್ತು ಶಾಂತಿಯ ಕಂಪನಗಳನ್ನು ಸೃಷ್ಟಿಸುತ್ತೇವೆ; ನಮ್ಮ ಕರ್ಮಗಳನ್ನು ಮತ್ತು ಸ್ಥಳದ, ತಂದೆತಾಯಿಯರ, ಆತ್ಮ ಸಂಗಾತಿಯ ಮತ್ತು ಸಮಾಜದ ಕರ್ಮಗಳನ್ನು ನಿವಾರಿಸುತ್ತೇವೆ.

–ಗುರೂಜಿ ಕೃಷ್ಣಾನಂದ



ಬೆಂಗಳೂರಿನ ರಾಜಾಜಿನಗರದಲ್ಲಿರುವ ಶಾಲೆಯೊಂದರಲ್ಲಿ ಜುಲೈ 22, 2023ರಂದು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲಾಯಿತು.




ಬೆಂಗಳೂರಿನ ಜಯನಗರದಲ್ಲಿರುವ ಶಾಲೆಯೊಂದರಲ್ಲಿ ಜುಲೈ 19, 2023ರಂದು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲಾಯಿತು.




ಪುಣೆಯ ಶಿಕ್ಷಕಿಯರು ಜುಲೈ 21, 2023ರಂದು ಲೈಟ್ ಚಾನಲ್ ಮಾಡಿದರು.

# ಉನ್ನತ ಉದ್ದೇಶ

**ಮನೋಜ್ ಕುಮಾರ್ ಚೋಪ್ರ; ಅನು: ಕಾಂಚನಲತಾ**

ಮಾನವನ ಚರಿತ್ರೆಯುದ್ದಕ್ಕೂ ಕ್ರಾಂತಿಗಳು ಸಂಭವಿಸಿವೆ. ಸಾಮಾನ್ಯವಾಗಿ, ಅದು ಒಂದು ವ್ಯವಸ್ಥೆಯ ವಿರುದ್ಧ ವಿಶಿಷ್ಟ ರೀತಿಯ ಪ್ರತಿಭಟನೆಯನ್ನು ಒಳಗೊಂಡಿರುತ್ತದೆ; ಅದು ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ವಿಷಯದ್ದಾಗಿರಬಹುದು. ಹಲವು ಕ್ರಾಂತಿಗಳು ಗೆಲುವನ್ನು ಕಂಡಿವೆ, ಆದರೆ ಕೆಲವೊಂದನ್ನು ಹತ್ತಿಕ್ಕಲಾಯಿತು ಮತ್ತೆ ಕೆಲವು ಸೋತವು. ಅವು ಗೆದ್ದಿರಬಹುದು ಅಥವಾ ಸೋತಿರಬಹುದು, ಆದರೆ ಅವು ಯಾವಾಗಲೂ ಮಾನವ ನಿರ್ಮಿತ ವ್ಯವಸ್ಥೆಗಳಿಗೆ ಅದ್ಭುತವಾದ ಬದಲಾವಣೆಗಳನ್ನು ತಂದಿವೆ. ಅವು ಯಾವಾಗಲೂ ಜಗತ್ತಿನಲ್ಲಿ ಒಂದು ಹೊಸ ಕ್ರಮವನ್ನು ಸೃಷ್ಟಿಸಿವೆ.

ಗುರೂಜಿ ಕೃಷ್ಣಾನಂದ ಅವರು ಬೆಳಕಿನಿಂದ ಕ್ರಾಂತಿಯನ್ನು (Revolution by Light) ಮೇ 18, 2008ರಂದು ಆರಂಭಿಸಿದರು. ಇದೊಂದು ಸದ್ದಿಲ್ಲದ ಆಧ್ಯಾತ್ಮಿಕ ಕ್ರಾಂತಿಯಾಗಿದೆ. ಗುರೂಜಿಯವರು ಇದಕ್ಕೆ ಬೆಳಕಿನ ಚಾನೆಲ್‌ಗಳ ವಿಶ್ವ ಸಂಚಲನ (Light Channels World Movement) ಎಂದು ಹೆಸರಿಟ್ಟರು. ಗುರೂಜಿಯವರು ಬೆಳಕನ್ನು ಚಾನೆಲ್ (Light channelling) ಮಾಡುವ ಸರಳ ತಂತ್ರವನ್ನು ಜಗತ್ತಿಗೆ ಪರಿಚಯಿಸಿದರು. ಲಕ್ಷಾಂತರ ಜನರು ಈ ಸಂಚಲನವನ್ನು ಸೇರಿದ್ದಾರೆ ಮತ್ತು ಇದು ಶೀಘ್ರವಾಗಿ ಹರಡುತ್ತಿದೆ. ಹಲವಾರು ಕಾರ್ಯಕರ್ತರು ಲೈಟ್ ಚಾನೆಲಿಂಗ್ ಬಗ್ಗೆ ಅರಿವನ್ನು ಮೂಡಿಸಲು ಕೆಲಸ ಮಾಡುತ್ತಿದ್ದಾರೆ. ಲಕ್ಷಾಂತರ ಮಕ್ಕಳು ಹಾಗೂ ವಯಸ್ಕರು ಈ ಸಂಚಲನವನ್ನು ಸೇರಿದ್ದಾರೆ ಮತ್ತು ಸಾವಿರಾರು ಜನರು ಪ್ರತಿದಿನ ಬೆಳಕನ್ನು ಚಾನೆಲ್ ಮಾಡುತ್ತಿದ್ದಾರೆ. ಬಹುಮಟ್ಟಿಗೆ ಪ್ರತಿಯೊಬ್ಬರೂ ಶಾಂತಿ ಮತ್ತು ಸಂತೋಷವನ್ನು ಅನುಭವಿಸುತ್ತಿದ್ದಾರೆ. ಹೆಚ್ಚು ಹೆಚ್ಚು ಮಂದಿ ತೆರೆದುಕೊಳ್ಳುತ್ತಿದ್ದಾರೆ ಮತ್ತು ಸಂಚಲನವು ಏಕಪ್ರಕಾರವಾಗಿ ಹರಡುತ್ತಿದೆ.

ವೈಯಕ್ತಿಕ ಪರಿವರ್ತನೆ ಈ ಸಂಚಲನದ ಉದ್ದೇಶವಾಗಿದೆ. ಆಧ್ಯಾತ್ಮಿಕ ಆಂದೋಲನವು ಯಾವಾಗಲೂ ವ್ಯಕ್ತಿಗಳಿಂದ ಆರಂಭವಾಗುತ್ತದೆ. ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳುವುದರ ಮೂಲಕ, ನಾವು ಆ ಕ್ರಾಂತಿಯಾಗುತ್ತೇವೆ.

**ಎರಿಕ್ ಹಾಫರ್ ಅವರ ಒಂದು ಅಖಂಡ ವಾಕ್ಯವು ಸತ್ಯವನ್ನು ವಿವರಿಸುತ್ತದೆ: ಕ್ರಾಂತಿಗಳು ಬದಲಾವಣೆಗೆ ಕಾರಣ ಎಂದು ನಾವು ಭಾವಿಸುತ್ತಿದ್ದೆವು. ವಾಸ್ತವದಲ್ಲಿ, ಇದು ಅದಕ್ಕೆ ವಿರುದ್ಧವಾದುದು: ಬದಲಾವಣೆಯು ಕ್ರಾಂತಿಗೆ ವೇದಿಕೆಯನ್ನು ಸಜ್ಜುಗೊಳಿಸುತ್ತದೆ.**

ನಾವು ಬದಲಾವಣೆಯ ಕುರಿತು ಕೆಲಸ ಮಾಡಬೇಕು. ಪ್ರತಿಯೊಂದು ನಕಾರಾತ್ಮಕ ಆಲೋಚನೆಯನ್ನು ತಿರಸ್ಕರಿಸುವುದರ ಮೂಲಕ, ನಮ್ಮ ಮನೋಭಾವವನ್ನು ಬದಲಾಯಿಸಿಕೊಳ್ಳುವ ಮೂಲಕ, ದೈವೀಕ ಚೈತನ್ಯಗಳನ್ನು ಮತ್ತು ಬೆಳಕನ್ನು ಒಪ್ಪಿಕೊಳ್ಳುವ ಮೂಲಕ ಬದಲಾವಣೆ ಉಂಟಾಗುತ್ತದೆ. ಆಧ್ಯಾತ್ಮಿಕ ಕ್ರಾಂತಿಯು ಉತ್ತಮ ನಾಳೆಗಾಗಿ ಭರವಸೆ ನೀಡುವ ಕ್ರಿಯೆಯಾಗಿದೆ. ಆಧ್ಯಾತ್ಮಿಕ ಕ್ರಾಂತಿಯು ಎಂದಿಗೂ ಹಿಮ್ಮೆಟ್ಟುವುದಿಲ್ಲ. ಅದು ಸದಾ ಮುಂದೆ ನಡೆಯುತ್ತದೆ. ಅದು ತನ್ನ ಉದ್ದೇಶವನ್ನು ಸದಾ ಸಾಧಿಸುತ್ತದೆ ಏಕೆಂದರೆ ಅದು ಲೈಟ್ ಮಾಸ್ಟರುಗಳಿಂದ ಉನ್ನತ ಉದ್ದೇಶಕ್ಕಾಗಿ ವಿನ್ಯಾಸಗೊಂಡಿದೆ. ಪ್ರತಿ ಕ್ರಾಂತಿಯೂ ಆರಂಭದಲ್ಲಿ ಅಸಾಧ್ಯವೆನಿಸುತ್ತದೆ ಆದರೆ, ಆ ಕ್ರಾಂತಿಯು ಪ್ರಗತಿ ಸಾಧಿಸುತ್ತಾ ಹೋದಂತೆ ಅದನ್ನು ನಿಲ್ಲಿಸಲು ಅಸಾಧ್ಯವೆನಿಸುತ್ತದೆ.

ಭೂಮಿಯ ಮೇಲೆ ನವಯುಗವನ್ನು ಸ್ಥಾಪಿಸುವುದು, ಪ್ರತಿಯೊಬ್ಬರ ಪ್ರತಿ ಕಣ್ಣೀರ ಹನಿಯನ್ನು ಒರೆಸುವುದು, ಜಗತ್ತಿನಲ್ಲಿ ಭರವಸೆಯನ್ನು ಮೂಡಿಸುವುದು, ಹಾಗೂ ಈ ಭೂಮಿಯ ವಿಧಿಯನ್ನು ತಿದ್ದಿ ಬರೆಯುವುದು ಈ ಕ್ರಾಂತಿಯ ಉನ್ನತ ಉದ್ದೇಶವಾಗಿದೆ.

ನಾವು ಮಾತ್ರವೇ ಅಲ್ಲ, ಇನ್ನೂ ಅನೇಕ ಗುಂಪುಗಳು ಈ ಕೆಲಸ ಮಾಡುತ್ತಿವೆ ಎಂದು ಗುರೂಜಿಯವರು ನಮಗೆ ಹೇಳಿದ್ದರು. ಅವರ ರೀತಿಗಳು ಬೇರೆ ಇರಬಹುದು ಆದರೆ ಎಲ್ಲರೂ ನವಯುಗಕ್ಕಾಗಿಯೇ ಕೆಲಸ ಮಾಡುತ್ತಿದ್ದಾರೆ. ನಾವು ಒಬ್ಬರಿಗೊಬ್ಬರು ಸಂಪರ್ಕಗೊಂಡು ಜೊತೆಯಾಗಿ ಏಕತೆಯಲ್ಲಿ ಕೆಲಸ ಮಾಡಿದರೆ, ಆಗ ಫಲಿತಾಂಶಗಳು ಶೀಘ್ರವಾಗಿರುತ್ತವೆ.

ಉತ್ತಮ ನಾಳೆಗಳನ್ನು ಕಲ್ಪಿಸಿಕೊಳ್ಳೋಣ ಮತ್ತು ಕನಸು ಕಾಣೋಣ. ■

## ಶಾಲೆಗಳಿಗೊಂದು ಮನವಿ

ನಿಮ್ಮ ತರಗತಿಗಳ ಪ್ರಾರಂಭದಲ್ಲಿ ಪ್ರತಿನಿತ್ಯ 3-7 ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡಿಸುವುದರ ಮೂಲಕ ಲೈಟ್ಸ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : 5877 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : 30.04 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : 550 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : 237577 |



ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.





# ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ನಾನು ಪ್ರತಿದಿನ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತೇನೆ. ನನ್ನ ಮನಸ್ಸು ಪ್ರಶಾಂತವಾಗುತ್ತದೆ. ನನಗೆ ಬೇರೆ ರೀತಿಯ ಚೈತನ್ಯ ಮತ್ತು ಬಲ ಸಿಗುತ್ತದೆ. ಯಾವುದಾದರೂ ಸ್ಪರ್ಧೆ ಇದ್ದರೆ ನನ್ನಲ್ಲಿ ಆತ್ಮ ವಿಶ್ವಾಸ ಹೆಚ್ಚುತ್ತದೆ.

–ನಮ್ರತ ನವ್‌ನಾಥ್ ಅಂಭುರೆ,
7ನೇ ತರಗತಿ, ಮುರ್ಕುಟೆ ಪ್ರೈಮರಿ ಸ್ಕೂಲ್, ಪುಣೆ

ನಾನು ಪ್ರತಿದಿನ ಬೆಳಕನ್ನು ಚಾನೆಲ್ ಮಾಡಲು ತುಂಬಾ ಇಷ್ಟಪಡುತ್ತೇನೆ. ಪ್ರತಿ ಬುಧವಾರ ಲೈಟ್ ಚಾನೆಲಿಂಗ್ ಸೆಷನ್‌ಗೆ ಶಿಕ್ಷಕರು ಬಂದಾಗ ನನಗೆ ತುಂಬಾ ಸಂತೋಷವಾಗುತ್ತದೆ. ಶಿಕ್ಷಕರು ನಮಗೆ ಲೈಟ್ ಚಾನೆಲಿಂಗ್ ಮಾಡಿ ಎಂದು ಹೇಳಿದಾಗಿನಿಂದಲೂ, ನನ್ನ ಅಕ್ಕ ಮತ್ತು ಪೋಷಕರ ಜೊತೆಯಲ್ಲಿ ಪ್ರತಿದಿನ ಮನೆಯಲ್ಲಿ ಲೈಟ್ ಚಾನೆಲ್ ಮಾಡುತ್ತೇನೆ. ನಾನು ಮುಂಚೆ ತುಂಬಾ ಶೀಘ್ರವಾಗಿ ಕೋಪಗೊಳ್ಳುತ್ತಿದ್ದೆ ಆದರೆ ಲೈಟ್ ಚಾನೆಲಿಂಗ್ ಮಾಡಲು ಆರಂಭಿಸಿದ ಮೇಲೆ ತುಂಬಾ ಪ್ರಶಾಂತವಾಗಿದ್ದೇನೆ.

–ಸ್ನೇಹ ರಮೇಶ್ ಚವನ್, 7ನೇ ತರಗತಿ,
ಮುರ್ಕುಟೆ ಪ್ರೈಮರಿ ಸ್ಕೂಲ್, ಪುಣೆ

ಪ್ರತಿಯೊಬ್ಬರಿಗೂ ಪ್ರೀತಿ, ಶಾಂತಿ ಹಾಗೂ ತನ್ನನ್ನು ತಾನು ಅರಿಯುವ ಅವಶ್ಯಕತೆ ಇರುವ ಇವತ್ತಿನ ಈ ಕಲಿಯುಗದ ಪ್ರಪಂಚದಲ್ಲಿ, ಇಡೀ ಪ್ರಪಂಚ ಸಮಯದ ಒತ್ತಡದಲ್ಲಿಯೇ ಉಳಿದಿದೆ. ಎಲ್ಲರ ಮನಸ್ಸಿನಲ್ಲಿ ಅಶಾಂತಿ ಇದೆ. ಮಕ್ಕಳ ಮನಸ್ಸು ಕೋವಿಡ್‌ನಿಂದ ತಳಮಳ–ಗೊಂಡಿದೆ. ಅವರನ್ನು ಸರಿಯಾದ ಮಾರ್ಗಕ್ಕೆ ತರುವುದು ಧ್ಯಾನ ಮಾರ್ಗದಿಂದ ಮಾತ್ರ ಸಾಧ್ಯ.

ಇಂತಹ ಸ್ಥಿತಿಯಲ್ಲಿ, ನೀವು ಆತ್ಮದ ಡಾಕ್ಟರ್ ಆಗಿದ್ದು ನಮ್ಮ ಶಾಲೆಯ ಮಕ್ಕಳಿಗೆ ಸರಿಯಾದ ಮಾರ್ಗವನ್ನು ತೋರಿಸಲು ಬಂದಿರುವಿರಿ. ಲೈಟ್ ಚಾನೆಲಿಂಗ್‌ನಿಂದಾಗಿ ನಮ್ಮ ಮಕ್ಕಳಲ್ಲಿ ಸಕಾರಾತ್ಮಕ ಬದಲಾವಣೆ ಕಂಡು ಬಂದಿದೆ. ಅವರು ಪ್ರಶಾಂತರಾಗಿದ್ದಾರೆ ಮತ್ತು ವಿಧೇಯ–ರಾಗಿದ್ದಾರೆ, ದೊಡ್ಡವರನ್ನು ಗೌರವಿಸಲು ಶುರು ಮಾಡಿದ್ದಾರೆ, ಮತ್ತು ನಿಯತವಾಗಿ ಓದಲು ಪ್ರಾರಂಭಿಸಿ–ದ್ದಾರೆ. ಈ ಎಲ್ಲ ಒಳ್ಳೆಯ ಗುಣಗಳನ್ನು ಮಕ್ಕಳಲ್ಲಿ ರೂಢಿಸಿದ್ದಕ್ಕಾಗಿ ನಿಮಗೆ ಹೃತ್ಪೂರ್ವಕವಾಗಿ ಧನ್ಯವಾದ–ಗಳನ್ನು ಅರ್ಪಿಸುತ್ತೇನೆ. ಈ ನಿಮ್ಮ ಪುಣ್ಯಕರವಾದ ಕೆಲಸ ಹೀಗೆಯೇ ಮುಂದುವರೆಯಲೆಂದು ನಾನು ಶಿವ ಬಾಬಾಗೆ ಪ್ರಾರ್ಥಿಸುತ್ತೇನೆ. ಓಂ ಶಾಂತಿ!

–ಅಲ್ಕಾ ಮಾಲ್ಗೊಂಡೇ, ಶಿಕ್ಷಕಿ, ಕರಂಜ್‌ಕರ್
ವಿದ್ಯಾಲಯ, ಸೊಲಾಪುರ್

ಬಾಗಲೂರಿನಲ್ಲಿರುವ ವಿಜಯ್ ಜ್ಯೋತಿ ಸ್ಕೂಲಿನ ಸುಮಾರು 1050 ವಿದ್ಯಾರ್ಥಿಗಳು 17–11–22ರಂದು ಲೈಟ್ ಚಾನೆಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು. ಸೆಷನ್ ಮುಗಿದ ನಂತರ ಶಾಲೆಯ ಮುಖ್ಯಸ್ಥರು ಮಾನಸ ಫೌಂಡೇಶನ್ ಮತ್ತು ಅವರ ಕಾರ್ಯಕರ್ತರು ಮಾಡುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಅನೇಕ ತಂಡಗಳು ಊಟವನ್ನು ಹಂಚುವ ಮೂಲಕ, ವಿದ್ಯಾಭ್ಯಾಸ–ಕ್ಕಾಗಿ ಹಣವನ್ನು ಒದಗಿಸುವ ಮೂಲಕ ಸಹಾಯ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಮಾನಸ ಫೌಂಡೇಶನ್ ಲೈಟ್ ಚಾನೆಲಿಂಗ್‌ನ್ನು ಕಲಿಸಿ ಅದರಿಂದ ಶಾಂತಿ ಮತ್ತು ಪ್ರೀತಿ ಹರಡುವ ಅನನ್ಯವಾದ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು.

–ಗಿರೀಶ್ ನಾಯಕ್, ಲೈಟ್ ಚಾನೆಲ್ ಕಾರ್ಯಕರ್ತ

ಕಳೆದ ವರ್ಷದ ತನಕ ನನ್ನ ಮಗ ಓದುವುದರಲ್ಲಿ ಹೆಚ್ಚು ಗಮನ ಹರಿಸುತ್ತಿರಲಿಲ್ಲ, ಹಾಗಾಗಿ ಅವನಿಗೆ ಶಾಲೆಯಲ್ಲಿ ಒಳ್ಳೆಯ ಅಂಕಗಳು ಬರುತ್ತಿರಲಿಲ್ಲ. ಅವನು ಸುಳ್ಳು ಹೇಳುತ್ತಿದ್ದ, ಚಿಕ್ಕ ವಿಷಯಗಳಿಗೆ ಅಳುತ್ತಿದ್ದ; ಅವನು ಬಹಳ ಮುಂಗೋಪಿಯಾಗಿದ್ದ. ಶಾಲೆಯಿಂದ ನಮಗೆ ಯಾವಾಗಲೂ ದೂರುಗಳು ಬರುತ್ತಿದ್ದವು. ಮಾನಸ ಫೌಂಡೇಶನ್‌ನಿಂದ ಬಂದ ಮ್ಯಾಡಮ್ ಒಬ್ಬರು ಲೈಟ್ ಚಾನೆಲಿಂಗ್‌ಅನ್ನು ಕಲಿಸಿ ಕೊಟ್ಟಿದ್ದರಿಂದ, ನನ್ನ ಮಗನಲ್ಲಿ ತುಂಬಾ ಬದಲಾವಣೆಗಳಾಗಿವೆ. ಅವನು ತುಂಬು ಹೃದಯದಿಂದ ಆದರ ಅಭ್ಯಾಸ ಮಾಡುತ್ತಾನೆ. ಈಗ ಅವನು ಓದುವುದರಲ್ಲಿ ಬುದ್ಧಿಶಾಲಿಯಾಗಿದ್ದಾನೆ; ಅವನ ಓದಿನ ಪ್ರಗತಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಅವನ ಶಾಲೆಯ ಶಿಕ್ಷಕರು ಸಹ ಇದನ್ನೇ ಹೇಳಿದರು. ಈಗ ಅವನು ಬಹಳ ಸೌಮ್ಯವಾಗಿರುತ್ತಾನೆ, ಅವನ ಮುಂಗೋಪ ಕಡಿಮೆ–ಯಾಗಿದೆ. ಈಗ ಅವನು ತರಗತಿಯ ಮಾನೀಟರ್ ಆಗಿದ್ದಾನೆ. ಈ ಎಲ್ಲಾ ಸಕಾರಾತ್ಮಕ ಬದಲಾವಣೆಗಳನ್ನು ನನ್ನ ಮಗನಲ್ಲಿ ನಾನು ನೋಡುತ್ತೇನೆ. ಈ ಚಟುವಟಿಕೆಗೆ ನಾನು ಮಾನಸ ಫೌಂಡೇಶನ್‌ಗೆ ತುಂಬಾ ತುಂಬಾ ಕೃತಜ್ಞಳಾಗಿದ್ದೇನೆ.

–ಅಶ್ವಿನಿ ನಕ್ತೆ, ಪೋಷಕರು

22–11–2022 ರಂದು ಪುಣೆಯ ಬ್ಲಾಸ್ಸಮ್ ಸ್ಕೂಲ್‌ನಲ್ಲಿ ನಡೆಸಿದ ಲೈಟ್ ಚಾನೆಲಿಂಗ್ ಸೆಷನ್‌ನಲ್ಲಿ ನಾವು ಅಮೂಲ್ಯವಾದ ಚೈತನ್ಯಗಳ ಅನುಭವವನ್ನು ಪಡೆದೆವು. ಸೆಷನ್ ಆದ ನಂತರ ಶಿಕ್ಷಕರು ಸೆಷನ್‌ನನ್ನು ಮೆಚ್ಚಿದರು ಮತ್ತು ಬೆಳಕಿನ ಶಾಂತಿ ಮತ್ತು ನಿಶ್ಚಲತೆ ಅವರಿಗೆ ತಟ್ಟಿತೆಂದು ಹೇಳಿದರು.

–ಪದ್ಮಜ ಬಾಜ್‌ಪೈ, ಲೈಟ್ ಚಾನೆಲ್ ಕಾರ್ಯಕರ್ತೆ

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ